**ಮಾನ್ಯ ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:17.10.2018 ರಂದು ಪೂರ್ವಾಹ್ನ: 11:30 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ Aadhaar Enabled Biometric Attendance System for PRIs ಕುರಿತು ಜರುಗಿದ ಸಭೆಯ ನಡವಳಿಗಳು.**

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)**

1. ಎಂ.ವಿ.ಸಾವಿತ್ರಿ, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ, ಬೆಂಗಳೂರು.
2. ಶ್ರೀನಿವಾಸ ಹೆಚ್.ಮಾರಂಗಪ್ಪನವರ್, ನಿರ್ದೇಶಕರು(ಇ-ಆಡಳಿತ) (ಪ್ರ), ಗ್ರಾಅಪ ಇಲಾಖೆ, ಬೆಂಗಳೂರು.
3. ಎಂ.ಕೆ.ಕೆಂಪೇಗೌಡ, ನಿರ್ದೇಶಕರು, ಪಂ.ರಾಜ್-1, ಗ್ರಾಅಪ ಇಲಾಖೆ, ಬೆಂಗಳೂರು.
4. ಪಿ.ಶ್ರೀಕೃಷ್ಣಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ಎಸ್.ಎನ್.ರಾವ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಕೆ.ವಿಶ್ವನಾಥ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ಸಿ.ಬಲರಾಮ್, ಶಾಖಾಧಿಕಾರಿ, ಗ್ರಾಮ ಪಂಚಾಯತಿ ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
8. ಗಗನ್ ಎ.ಎಸ್, ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
9. ಶಿಲ್ಪ ಈ, ಪಂಚಾಯತಿ ಅಭಿವೃದ್ಧಿ ಅಧಿಕಾರಿ(ನಿ), (ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
10. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
11. ಸಿಂಧೂರಾಣಿ ಡಿ.ಬಿ, ಪ್ರೋಗ್ರಾಮರ್, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.

ನಿರ್ದೇಶಕರು (ಇ-ಆಡಳಿತ), ಗ್ರಾಅಪ ಇಲಾಖೆ ಇವರು ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು.

1) ರಾಜ್ಯ ಯೋಜನಾ ವ್ಯವಸ್ಥಾಪಕರು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಉಪಯೋಗಿಸುತ್ತಿರುವ ಇ-ಹಾಜರಾತಿ ತಂತ್ರಾಂಶದ ಬಗ್ಗೆ ಹಾಗೂ ಪ್ರಸ್ತುತ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಆಧಾರ್ ಆಧಾರಿತ ಇ-ಹಾಜರಾತಿ ತಂತ್ರಾಂಶ - Aadhaar Enabled Biometric Attendance System ನ ಪ್ರಯೋಜನಗಳ ಬಗ್ಗೆ ಸಭೆಗೆ ತಿಳಿಸಿದರು.

2) ಕಾರ್ಯದರ್ಶಿಗಳು(ಪಂ.ರಾಜ್) ರವರು Aadhaar Enabled Biometric Attendance System ನ್ನು ಹೆಚ್.ಆರ್.ಎಂ.ಎಸ್ ಗೆ ಲಿಂಕ್ ಮಾಡಿದಲ್ಲಿ ಸಿಬ್ಬಂದಿಗಳ ರಜೆಗಳ ಮೇಲೆ ನಿಯಂತ್ರಣ ಸಿಗುವುದು ಎಂದು ತಿಳಿಸಿದರು. ಈ ಬಗ್ಗೆ DPAR(HRMS) ಮತ್ತು DPAR(e-gov) ರವರೊಂದಿಗೆ ಸಭೆಯನ್ನು ಕರೆದು ಚರ್ಚಿಸಿ ಕ್ರಮಕೈಗೊಳ್ಳಲು ತಿಳಿಸಿದರು.

3) Aadhaar Enabled Biometric Attendance System ನಲ್ಲಿ ಸಿಬ್ಬಂದಿಗಳ ಆಧಾರ್ ಡೇಟಾಬೇಸ್ ಲಿಂಕ್ ಮಾಡುವ ಮುನ್ನ ಆಧಾರ್ ಡೇಟಾಬೇಸ್‌ನ access ಮಾಡಲು ಇ-ಆಡಳಿತ ಶಾಖೆ, ಸಿಆಸು ಇಲಾಖೆಯ ಅನುಮತಿ ಪಡೆಯಬೇಕಾಗುತ್ತದೆ ಎಂದು ಎನ್.ಐ.ಸಿ ಯ ಅಧಿಕಾರಿಗಳು ತಿಳಿಸಿದರು. ಕಾರ್ಯದರ್ಶಿಗಳು(ಪಂ.ರಾಜ್) ರವರು ಈ ಬಗ್ಗೆ ಇ-ಆಡಳಿತ ಶಾಖೆ, ಸಿಆಸು ಇಲಾಖೆ ರವರಿಗೆ ಪತ್ರಿಸಲು ನಿರ್ದೇಶಕರು(ಇ-ಆಡಳಿತ) ರವರಿಗೆ ತಿಳಿಸಿದರು.

....2

4) ಕಾರ್ಯದರ್ಶಿಗಳು(ಪಂ.ರಾಜ್) ರವರು Aadhaar Enabled Biometric Attendance System ನ ಅನುಷ್ಠಾನಕ್ಕೆ ಉಪ ಕಾರ್ಯದರ್ಶಿ, ಆಡಳಿತ-1 ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದ್ದು, ಒಂದು ತಿಂಗಳೊಳಗಾಗಿ ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸೂಚಿಸಿದರು.

5) ಕಾರ್ಯದರ್ಶಿಗಳು(ಪಂ.ರಾಜ್) ರವರು Aadhaar Enabled Biometric Attendance System ನ್ನು ಪ್ರಾರಂಭಿಕವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿ ಸದರಿ ಜಿಲ್ಲೆಯಲ್ಲಿ ಯಶಸ್ವಿ ಅನುಷ್ಠಾನಗೊಂಡ ನಂತರ ಇತರ ಜಿಲ್ಲೆಗಳಿಗೆ ವಿಸ್ತರಿಸುವಂತೆ ಕ್ರಮವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

6) ಎನ್.ಐ.ಸಿ ಯ ಹಿರಿಯ ತಾಂತ್ರಿಕ ನಿರ್ದೇಶಕರು On boarding form ನೀಡಿದ ಒಂದು ವಾರದೊಳಗೆ ತಂತ್ರಾಂಶವನ್ನು ಸಿದ್ಧಪಡಿಸಲಾಗುವುದು ಎಂದು ಸಭೆಗೆ ತಿಳಿಸಿದರು.

7) ಕಾರ್ಯದರ್ಶಿಗಳು(ಪಂ.ರಾಜ್) ರವರು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತಿಗಳಲ್ಲಿ ಇ-ಹಾಜರಾತಿಗಾಗಿ ಬಳಸುತ್ತಿರುವ Biometric Device ಹೊಸ Aadhaar Enabled Biometric Attendance System ಗೆ compatible ಇರುವುದೇ ಎಂದು ಕೇಳಿದರು. ಇದಕ್ಕೆ ರಾಜ್ಯ ಯೋಜನಾ ವ್ಯವಸ್ಥಾಪಕರು ಪ್ರಸ್ತುತ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ Hamster Pro 2.0 ಬಳಸಲಾಗುತ್ತಿದ್ದು, ಇದು compatible ಇರುವುದಾಗಿ ಸಭೆಗೆ ತಿಳಿಸಿದರು.

8) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್‌ಗಳಲ್ಲಿ ಅಂದಾಜು 70 ಸಾವಿರ ಸಿಬ್ಬಂದಿಗಳು ಇರುವುದಾಗಿ ರಾಜ್ಯ ಯೋಜನಾ ವ್ಯವಸ್ಥಾಪಕರು ತಿಳಿಸಿದರು. ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ ರವರು 70 ಸಾವಿರ ಸಿಬ್ಬಂದಿಗಳ ಹಾಜರಾತಿ ಪಡೆಯಲು ಪ್ರಸ್ತುತ ಹಾಜರಾತಿಗಾಗಿ ಬಳಸುತ್ತಿರುವ NIC Server ಗಳ Capacity ಕಡಿಮೆ ಇದ್ದು Aadhaar Based Biometric Attendance System ನ ಸಮರ್ಪಕ ಬಳಕೆಯಾಗುವುದಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಭಾರತ ಸರ್ಕಾರದ ಎನ್.ಐ.ಸಿ ಯು ಪ್ರತ್ಯೇಕವಾಗಿ ಸರ್ವರ್‌ಗಳನ್ನು ಅಳವಡಿಸಲು ತೀರ್ಮಾನಿಸಿದ್ದು, ರಾಜ್ಯ ಸರ್ಕಾರದಿಂದ ನಿರ್ದಿಷ್ಟ ಮೊತ್ತ ಪಾವತಿಸಿ ಸದರಿ ಸರ್ವರ್‌ಗಳಲ್ಲಿ ಜಾಗ ಪಡೆಯಬಹುದು ಎಂದು ಸಭೆಗೆ ತಿಳಿಸಿದರು.

9) ಕಾರ್ಯದರ್ಶಿಗಳು(ಪಂ.ರಾಜ್) Aadhaar Enabled Biometric Attendance System ನ್ನು ಬಳಸಲು ಸರ್ವರ್‌ಗೆ ತಗಲುವ ವೆಚ್ಚದ ಬಗ್ಗೆ ಎನ್.ಐ.ಸಿ ಅಧಿಕಾರಿಗಳಿಗೆ ಪ್ರಶ್ನಿಸಿದರು. ಎನ್.ಐ.ಸಿ ಯ ತಾಂತ್ರಿಕ ನಿರ್ದೇಶಕರು ಪ್ರತಿ ಬಳಕೆದಾರರಿಗೆ ವರ್ಷಕ್ಕೆ ರೂ.50/- ಆಗಬಹುದು ಎಂದು ತಿಳಿಸಿದಾಗ ಕಾರ್ಯದರ್ಶಿಗಳು(ಪಂ.ರಾಜ್) ರವರು ಸದರಿ ವೆಚ್ಚವನ್ನು ಆಯಾ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ಕಛೇರಿಗಳಿಂದಲೇ ಪಾವತಿಸಲು ಕ್ರಮವಹಿಸಲು ತಿಳಿಸಿದರು. ಎನ್.ಐ.ಸಿ ಹಿರಿಯ ತಾಂತ್ರಿಕ ನಿರ್ದೇಶಕರು ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರಸ್ತುತ ಬಳಸುತ್ತಿರುವ ಸರ್ವರ್‌ನಲ್ಲಿ ಉಚಿತವಾಗಿ ಸೇವೆ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.

...3

10) ರಾಜ್ಯ ಯೋಜನಾ ವ್ಯವಸ್ಥಾಪಕರು ಹಲವು ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿ ಹೆಚ್ಚು ಸಿಬ್ಬಂದಿಗಳಿದ್ದು, ಒಂದು Biometric Device ಇರುವುದರಿಂದ ಇ–ಹಾಜರಾತಿ ಪಡೆಯಲು ಹೆಚ್ಚು ಸಮಯವಾಗುತ್ತಿದ್ದು, ಅಂತಹ ಕಛೇರಿಗಳಲ್ಲಿ ಒಂದಕ್ಕಿಂತ ಹೆಚ್ಚು Biometric Device ಬಳಸಲು ಅವಕಾಶ ಕಲ್ಪಿಸಲು ಅನುಕೂಲವಾಗುವುದು ಎಂದು ತಿಳಿಸಿದರು. ಕಾರ್ಯದರ್ಶಿಗಳು(ಪಂ.ರಾಜ್) ರವರು ಸಿಬ್ಬಂದಿಗಳ ಸಂಖ್ಯೆಗೆ ಅನುಗುಣವಾಗಿ Biometric Device ಗಳನ್ನು ಕಛೇರಿಗಳಲ್ಲಿ Install ಮಾಡಲು ಕ್ರಮವಹಿಸುವಂತೆ ತಿಳಿಸಿದರು.

ಕೊನೆಯಲ್ಲಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಸಂ:**ಗ್ರಾಅಪ/21/ಗ.ಕೋಶ/2018
**ದಿನಾಂಕ:**26.10.2018
(ಕಂಡಿಕೆ(23) ರಲ್ಲಿ ಮಾನ್ಯ ಸರ್ಕಾರದ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿದೆ)

26/10/18
(ಶ್ರೀನಿವಾಸ ಹೆಚ್.ಮಾರಂಗಪ್ಪನವರ್)
ನಿರ್ದೇಶಕರು(ಇ–ಆಡಳಿತ) (ಪ್ರ) ಹಾಗೂ
ಪ/ನಿ ಸರ್ಕಾರದ ಉಪಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ನಿರ್ದೇಶಕರು(ಪಂ.ರಾಜ್–1), ಗ್ರಾಅಪ ಇಲಾಖೆ, ಬೆಂಗಳೂರು.
2. ಪಿ.ಶ್ರೀಕೃಷ್ಣಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
3. ಎಸ್.ಎನ್.ರಾವ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
4. ಕೆ.ವಿಶ್ವನಾಥ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ಸಿ.ಬಲರಾಮ್, ಶಾಖಾಧಿಕಾರಿ, ಗ್ರಾಮ ಪಂಚಾಯತಿ ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
6. ಸಹಾಯಕ ನಿರ್ದೇಶಕರು(ಇ–ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
7. ಪಂಚಾಯತಿ ಅಭಿವೃದ್ಧಿ ಅಧಿಕಾರಿ(ನಿ), (ಇ–ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
8. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ–ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
9. ಸಿಂಧೂರಾಣಿ ಡಿ.ಬಿ, ಪ್ರೋಗ್ರಾಮರ್, ಇ–ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.